457. SRI N. BASAVAIAH (Chicknaikanahalli).— Will be Minister for Excise and Labour be pleased to state:—

(*a*) the rate fixed by the Government for per litre of Arrack;

(*b*) whether the retail selling price has been fixed for the contractors ;

(*c*) if not, whether the Government would fix the price per litre ;

(*d*) the reasons for different selling prices in different Taluks?

SRI S. M. YAHYA (Minister for Excise and Labour):—

(*a*) Rs. 5 per liter.

(*b*) No.

(*c*) No.

(*d*) The selling prices will depend on shop rent and other charges.

ಶ್ರೀ ಎನ್. ಬಸವಯ್ಯ.— ಸ್ವಾಮಿ, ಈಗ ಸಾರಾಯಿ ಒಂದು ಲೀಟರ್‌ಗೆ ೫ ರೂಪಾಯಿ ನಿಗದಿ ಮಾಡಿದ್ದೀರಿ. ಇದನ್ನು ಮಾರತಕ್ಕವರು, ಅಂಗಡಿಗೆ ಎಲ್ಲಾ ಖರ್ಚು ನೋಡಿಕೊಂಡರೆ ಲಾಭಾಂಶ ಎಷ್ಟು ಇಟ್ಟುಕೊಳ್ಳಬೇಕು? ಅದನ್ನು ಉಪಯೋಗಿಸತಕ್ಕವರು ಕಾರ್ಮಿಕರು ಮಂತ್ರಿ ಬಡವರು ಅವರು ಲಾಭ, ಖರ್ಚುವೆಚ್ಚ ಉಳಿಸಿಕೊಂಡು ಮಾರುತ್ತಾರೆ. ಒಂದೊಂದು ರೀತಿ ಮಾರುತ್ತಾರೆ. ಅದಕ್ಕೆ ಮಿತಿ ಹಾಕುವುದಕ್ಕೆ ಸಾಧ್ಯವೇ?

†ಶ್ರೀ ಎಸ್. ಎಂ. ಯಾಹ್ಯಾ.... ಈಗ ಬಿಸಿನೆಸ್‌ನಲ್ಲಿ ತುಂಬಾ ರಿಸ್ಕ್ ಇರುತ್ತದೆ ಇದರಲಿ ಲಾಭ ಬರುವುದೂ ಇರುತ್ತದೆ, ನಷ್ಟವಾಗಬಹುದು ಇರುತ್ತದೆ. ಈಗ ಬಿಸಿನೆಸ್‌ನಲ್ಲಿ ಸ್ವಲ್ಪ ರೇಟ್ ಹೆಚ್ಚಾಗಬಹುದು ಅಥವಾ ಸ್ವಲ್ಪ ರೇಟ್ ಕಡಿಮೆಯಾಗಬಹುದು ಇದು ಎಲ್ಲಾ ತಾಲ್ಲೂಕಿನಲ್ಲಿ, ಜಿಲ್ಲೆಗಳಲ್ಲಿ ಪರಾಜು ಆಗುತ್ತದೆ, ಅದು ಅಲ್ಲೇ ಸೇಲ್ ಆಗುತ್ತದೆ ಉದ್ದೇಶ ಏನು ಎಂದರೆ ಸರ್ಕಾರಕ್ಕೆ ರೆವಿನ್ಯೂ ಹೆಚ್ಚು ಬರಬೇಕು ಎಂಬುದೇ ಮೂಲ ಉದ್ದೇಶ

ಶ್ರೀ ಡಿ. ದೇವರಾಜ್ ಅರಸ್.—ಶ್ರೀಮಾನ್ ಕೊಣಂದೂರು ಲಿಂಗಪ್ಪನವರು ಕೇಳಿದ ಹಿಂದಿನ ಪ್ರಶ್ನೆಗೆ ಉತ್ತರವಾಗಿ ನಾನು ಹೇಳಿದ್ದು ತಪ್ಪಾಗಿದೆ. ಅದನ್ನು ತಿದ್ದಿಕೊಳ್ಳುತ್ತೇನೆ ಶಿವಮೊಗ್ಗ ಜಿಲ್ಲೆ ಬ್ಯಾಕ್‌ವರ್ಡ್ ಜಿಲ್ಲೆಗಳಲ್ಲಿ ಸೇರಿದೆ ಎಂದೂ ಹೇಳಿದ್ದೆ, ಅದು ಸೇರಿಲ್ಲ, ಶಿವಮೊಗ್ಗ ಬಹಳ ಫಾರ್‌ವರ್ಡ್ ಆಗಿಬಿಟ್ಟಿದೆ. ಹಿಂದುಳಿರತಕ್ಕ ೧೧ ಜಿಲ್ಲೆಗಳು ಯಾವುದೆಂದರೆ, ಬೆಳಗಾಂ ಬಿಜಾಪುರ, ಬೀದರ್, ಧಾರವಾಡ್, ಗುಲ್ಬರ್ಗ, ಹಾಸನ್, ನಾರ್ತ್‌ಕೆನರಾ, ತುಮಕೂರು ಮೈಸೂರು, ರಾಯಚೂರು, ಮತ್ತು ಬಳ್ಳಾರಿ. ಇತ್ತೀಚೆಗೆ ಐದನೇ ಪಂಚಾರ್ಷಿಕ ಯೋಜನೆಯ ವೇಳೆಯಲ್ಲಿ ೨೨ ಸೂಚ್ಯಾಂಕಗಳನ್ನು ಆಧರಿಸಿ ಒಟ್ಟು ಗೂಡಿಸಿ ಕೇಂದ್ರ ಸರ್ಕಾರದವರು ಒಂದು ಅಳತೆಗೋಲು ಮಾಡಿ ಅದರಿಂದ ಎಲ್ಲಾ ಜಿಲ್ಲೆಗಳನ್ನು ಅಳೆದಿದ್ದಾರೆ. ಅದರ ಪ್ರಕಾರ Leckily for Mr. Lingappa, Shimogaಕ್ಕೆ ಡೆವೆಲಪ್‌ಡ್ ಡಿಸ್ಟ್ರಿಕ್ಟ್ ಪೈಕಿ ೩ನೇ ಸ್ಥಾನಗಳಿಸಿದೆ. ಹೈಲಿ ಡೆವಲಪ್‌ಡ್ ಎಂದು ಹೇಳಿದರೆ ಬೆಂಗಳೂರು, ಇದು ಬಿಟ್ಟರೆ ಸೌತ್‌ಕೆನರಾ, ಮೂರನೆಯದು ಡೆವಲಪ್‌ಡ್ ಡಿಸ್ಟ್ರಿಕ್ಟ್‌ನ ಪೈಕಿ ಶಿವಮೊಗ್ಗ, ಕೋಲಾರ, ಮೈಸೂರು, ಮಂಡ್ಯ, ಕೂರ್ಗ್ too close to State Average, ನಾರ್ತ್‌ಕೆನರಾ, ಚಿಕ್ಕಬಳ್ಳಾಪುರ, ಚಿತ್ರದುರ್ಗ. ಬ್ಯಾಕ್‌ವರ್ಡ್ ತುಮಕೂರು, ರಾಯಚೂರ್, ಬೀದರ್. ಹೈಲಿ ಬ್ಯಾಕ್‌ವರ್ಡ್ ಈ ಸಾರಿ ಗುಲ್ಬರ್ಗ.

ಶ್ರೀ ಎಸ್. ಎಂ. ಯಾಹ್ಯಾ.—ಆಕ್ಷನ್ ಹೆಚ್ಚಾಗಿಬಿಟ್ಟರೆ ಸೇಲ್‌ನಲ್ಲಿ ಪ್ರೈಸ್ ಹೆಚ್ಚಾಗಬಹುದು ಬೆಳಗಾಂನಲ್ಲಿ, ಫುಲ್ ಬಲ್ಕ್ ಲೀಟರ್‌ಗೆ ೧೫ ರೂಪಾಯಿವರೆಗೆ ಇದೆ, ಬೆಂಗಳೂರಿನಲ್ಲಿ ೧೦ ರೂಪಾಯಿ ಇದೆ ಮಂಗಳೂರಿನಲ್ಲಿ ಕಡಿಮೆ ಇದೆ. ಆಕ್ಷನ್ ಎಕನಾಮಿಕ್ ಕಂಡೀಷನ್ ಮೇಲೆ ಪ್ರೈಸ್ ಹೊಂದಿಕೊಂಡಿದೆ. ರೇಟನ್ನು ಫಿಕ್ಸ್ ಮಾಡುವುದಕ್ಕೆ ಡಪ್ಯುಟಿ ಕಮಿಷನರಿಗೆ ಅಧಿಕಾರ ಇದೆ. ಆ ರೀತಿ ಮಾಡಬೇಕಾದ ಅಗತ್ಯ ಏನೂ ಬರಲಿಲ್ಲ. ಆದುದರಿಂದ ಈ ಅಧಿಕಾರವನ್ನು ಇಲ್ಲಿಯವರೆಗೆ ಚಲಾಯಿಸಿಲ್ಲ.

ಶ್ರೀ ಎನ್. ಬಸವಯ್ಯ.—ಒಂದೇ ಜಿಲ್ಲೆಯಲ್ಲಿ ಕಂಟ್ರಾಕ್ಟರ್ಸ್, ವೆಂಡರ್ಸ್ ಸಬ್ ಕಂಟ್ರಾಕ್ಟ್ ಕೊಡುತ್ತಾರೆ. ಅವರು ಒಂದು ಅಂಗಡಿಯಲ್ಲಿ ೨-೧೫ಕ್ಕೆ ಕೊಡುತ್ತಾರೆ, ೨-೮೦ಕ್ಕೆ ಕೊಡುತ್ತಾರೆ, ಇನ್ನೊಂದು ಅಂಗಡಿಯಲ್ಲಿ ೨ ರೂಪಾಯಿಗೆ ಮಾರುತ್ತಾರೆ. ಈ ರೀತಿ ತಾರತಮ್ಯ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ಪೈಸ್ ಒಂದೇ ರೀತಿ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಕೆಲವರು ಜಾಸ್ತಿ ಕ್ರಯಕ್ಕೆ ಮಾರುತ್ತಾರೆ, ಕೆಲವರು ಕಡಿಮೆ ಕ್ರಯಕ್ಕೆ ಮಾರುತ್ತಾರೆ. ಇದೆಲ್ಲಾ ಕಾಂಪಿಟಿಷನ್ ಮೇಲೆ ನಡೆಯುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.—ಕೆಲವು ಅಂಗಡಿಗಳಲ್ಲಿ ಕಳ್ಳಭಟ್ಟಿ ಸಾರಾಯಿಯವನ್ನು ಇದಕ್ಕೆ ಮಿಕ್ಸ್‌ಮಾಡಿ ಮಾರಾಟಮಾಡುತ್ತಿದ್ದಾರೆ. ಇದರಿಂದ ಅನೇಕ ಜನ ಆರೋಗ್ಯ ಕೆಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ಅದನ್ನು ತಪ್ಪಿಸುವುದಕ್ಕೆ ಏನಂ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಸ್. ಎಂ. ಯಾಹ್ಯಾ.—ಇದು ಇಲಿಸಿಟ್ ಡಿಸ್ಟಿಲೇಷನ್ ಆಗುವುದಿಲ್ಲ ಎಂದು ಹೇಳುವುದಕ್ಕೆ ಬರುವುದಿಲ್ಲ. It is the one of the reasons why in some places the price is a little lower than in other places. It may be due to illicit distillation also.

ಶ್ರೀ ಟಿ. ಎಂ. ಮಂಜುನಾಥ್.—ತಾವು ಹರಾಜು ಮುಖಾಂತರ ಸಾರಾಯಿಯನ್ನು ಕೊಡುತ್ತಿದ್ದೀರಿ ಅದಕ್ಕೆ ಬದಲಾಗಿ ಸರ್ಕಾರದವರು ಹರಾಜು ಮುಖಾಂತರ ತಮಗೆ ಏನು ಟ್ಯಾಕ್ಸ್ ಬರುತ್ತದೆ ಅದನ್ನೂ ಸೇರಿಸಿ ತಾವೇ ಒಂದು ರೇಟನ್ನು ನಿಗದಿ ಮಾಡಿ ರಾಜ್ಯದ ಎಲ್ಲಾ ಕಡೆ ಜಾರಿಗೆ ಬರುವಂಥ ಕಾರ್ಯಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆಯೇ ?

ಶ್ರೀ ಎಸ್ ಎಂ. ಯಾಹ್ಯಾ.—ರೀಟೇಲ್ ರೇಟನ್ನು ಯೂನಿಫಾರಂ ಆಗಿ ಮಾಡುವುದು ಬಹಳ ಕಷ್ಟ, ಏಕೆಂದರೆ ಅಕ್ಷನ್ ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ಆಗಿರುತ್ತದೆ. ಆಕ್ಟ ಪ್ರಕಾರ ಡಿಸ್ಟ್ರಿಕ್ಟ್‌ನಲ್ಲಿ ಒಂದು ಪೈಸ್ ಫಿಕ್ಸ್ ಮಾಡುವುದಕ್ಕೆ ಡೆಪ್ಯುಟಿ ಕಮಿಷನರಿಗೆ ಪವರ್ ಇದೆ. ಅವರು ಮಿನಿಮಂ ಮ್ಯಾಗ್ನಿಮಂ ರೇಟ್ ಫಿಕ್ಸ್ ಮಾಡುತ್ತಾರೆ. ಈವರೆಗೆ ಇಂಥಾದ್ದು ಯಾವುದು ಆಗತ್ಯ ಬಂದಿಲ್ಲ. ಅಂಥಾದ್ದು ಯಾವುದಾದರೂ ಆಗತ್ಯ ಬಂದರೆ ಡಿಸ್ಕ್ರೆಷನ್ ಉಪಯೋಗಿಸಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಆಗತ್ಯ ಬಂದಿಲ್ಲ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ ಕುಡಿಯುವವರು ಬಂದು ನಿಮಗೆ ಹೇಳಬೇಕೇ. ಏಕೆಂದರೆ ಎಕ್ಸ್‌ಸೈಜ್ ಕಂಟ್ರಾಕ್ಟರ್ ಮರ್ಜಿ ಪ್ರಕಾರ ಬೆಲೆ ಮಾಡಲಿಕ್ಕೆ ಸಾಧ್ಯವಿಲ್ಲ. ಹರಾಜು ಮಾಡತಕ್ಕ ಕಾಲದಲ್ಲಿ ಇಂಡಿಕೇಟ್ ಮಾಡಿ ಅದರ ಮೇಲೆ ಬಿಟ್ ಮಾಡುವುದಕ್ಕೆ ಅನುವು ಆಗುತ್ತಿದೆ, ಶೋಷಣೆ ಮಾಡುವುದಕ್ಕೆ ಇತಿಮಿತಿ ಇಲ್ಲ. ಡೆಪ್ಯುಟಿ ಕಮಿಷನರಿಗೆ ಯಾರು ದೂರು ಕೊಡುವುದು. ಆದುದರಿಂದ ಎಕ್ಸ್‌ಪ್ಲಾಯಿಟ್ ಮಾಡತಕ್ಕ ಜನರನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು. ಸರ್ಕಾರ ದಯಮಾಡಿ ಈ ವಿಷಯದಲ್ಲಿ ಪುನರ್ಪರಿಶೀಲನೆಮಾಡಿ ಆಯಾಯ ಜಿಲ್ಲೆಗೆ ಸಂಬಂಧಪಟ್ಟ ರೇಟನ್ನು ನಿಗದಿ ಮಾಡುವುದಕ್ಕೆ ಯಾರಾದರೂ ಮನವಿ ಕೊಡಲಿ, ಬಿಡಲಿ ಪ್ರಯತ್ನ ಮಾಡಬೇಕು. He should not sell beyond such and such a rate ಎಂದು ಸೆಲ್ಲಿಂಗ್ ಪ್ರೈಸ್ ಫಿಕ್ಸ್ ಮಾಡುವುದು ಸರ್ಕಾರಕ್ಕೆ ಯೋಗ್ಯವಲ್ಲವೇ ಎನ್ನುವುದು ತಿಳಿಸುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಇಂತಹ ಸಂದರ್ಭ ಈ ವರೆಗೆ ಬರಲಿಲ್ಲ. ಕೆಲವು ಕಡೆ ಬೆಲೆ ಕಡಿಮೆ ಇದೆ, ಆವರು ಕಡಿಮೆ ಪ್ರಾಫಿಟ್ ತೆಗೆದುಕೊಳ್ಳುತ್ತಿದ್ದಾರೆ. ಇದೆಲ್ಲಾ ಬಿಸಿನೆಸ್ ಇರುವುದರಿಂದ ತೀರ ರೆಗುಲೇಟ್ ಮಾಡಬೇಕು, ಮಾಡಬಾರದು ಎನ್ನುವುದು ಯೋಚನೆಮಾಡಿ ಮಾಡುವಂಥ ವಿಷಯ.

ಶ್ರೀ ಎಂ, ಎಚ್. ಜಯಪ್ರಕಾಶ ನಾರಾಯಣ್,—ಸ್ವಾಮಿ, ತಾವು "The selling prices will depend on shop rent and other charges" ಎಂದು ಹೇಳಿದ್ದೀರಿ. ಹಾಗೆಂದರೆ ಸರ್ಕಾರದವರು ೫ ರೂಪಾಯಿ ನಿಗದಿ ಮಾಡಿದ್ದಾರೆ ಎಂದು ಒಂದು ಕಡೆ ಗೊತ್ತಾಗುತ್ತದೆ. ಆದರೆ ಡಿಪೆಂಡ್ ಆನ್ ಷಾಪ್ ರೆಂಟ್" ಎಂದು ಹೇಳಿದ್ದೀರಿ. ಇದಕ್ಕೆ ರಾಜ್ಯದಲ್ಲಿ ಮ್ಯಾಗ್ನಿಮಂ ಎಷ್ಟು, ಮಿನಿಮಂ ಎಷ್ಟಿದೆ ಎಂದು ತಿಳಿಸುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಅರಕ್‌ನ್ನು ಸರ್ಕಾರ ಕಂಟ್ರೋಲ್ ಮಾಡಿಕೊಂಡು ಮನೋಪಲಿ ಮಾಡಿಕೊಂಡು ಬೇರೆಯವರಿಗೆ ಕೊಡುತ್ತೇವೆ. ರೀಟೇಲ್ ರೇಟ್ ಫಿಕ್ಸ್ ಮಾಡಿರುವುದಿಲ್ಲ.

ಶ್ರೀ ಟಿ. ಆರ್ ಶಾಮಣ್ಣ —ಅರಕನ್ನು ಅಳತೆ ಮಾಡುವಾಗ ಬಹಳ ಕಡಿಮೆ ಕೊಟ್ಟು ಕುಡುಕರಿಗೆ ಮೋಸಮಾಡುವುದು ತವ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ರೂಲ್ಸನ್ನು ಈ ಬಗ್ಗೆ ಕಟ್ಟುನಿಟ್ಟಾಗಿ ಜಾರಿ ಮಾಡಿದ್ದೇವೆ. ಅಳತೆ ಮಾಡುವ ಸಾಧನದ ಬಾಯಿ ತುಂಬ ಹಾಕದೆ ಕಡಿಮೆ ಕೊಡುವುದು ಮತ್ತು ಮೇಜುಗಳ ಮೇಲೆ ಇಟ್ಟು ಕೊಂಡು ಕೊಡುವುದು ನಡೆಯುತ್ತಿದೆ. ಅದರಲ್ಲಿ ಇಷ್ಟು ಪ್ರಮಾಣದ ಎತ್ತರ ವೇಜು ಇರಬೇಕು ಎಂದು ಕಾನೂನು ಇದೆ. ಕೆಲವು ಕಡೆ ಎತ್ತರ ಜಾಸ್ತಿಯಾಗಿಟ್ಟುಕೊಂಡು ನಿಂತುಕೊಂಡು ತೆಗೆದುಕೊಳ್ಳುವವರಿಗೆ ಕಾಣಿಸದ ಹಾಗೆ ಅಳತೆ ಮಾಡಿ ಕೊಡುವುದು ನಡೆಯುತ್ತಿತ್ತು. ಇದನ್ನೆಲ್ಲಾ ಎಕ್ಸ್‌ಸೈಜ್ ಕಮಿಷನರ್ ಪತ್ರೆ ಹಚ್ಚಿದ ಮೇಲೆ ಟೇಬಲ್ಸ್ ಎತ್ತರವನ್ನು ತಗ್ಗುಮಾಡಿ ಯಾವ ಮನುಷ್ಯ ನಿಂತುಕೊಂಡು ತೆಗೆದುಕೊಳ್ಳುತ್ತಾನೋ ಅವನಿಗೆ ಕಾಣಿಸುವ ಹಾಗೆ ಇರುವುದಕ್ಕೆ ಏರ್ಪಾಡು ಮಾಡಿದೆ. ಇದನ್ನು ರೆಗ್ಯುಲೇಟ್ ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ಕೇಳಿದಿರಲ್ಲ, When it is auctioned, I cannot say at this stage whether it is feasible or possible under the law to regulate the retail sale value. Anyway now that there is a suggestion we will examine carefully whether it is possible or not.

* *Interviews by K. P. S. C. and Departmental Committees*

486 SRI H G. CHANNAPPA (Magadi).—Will the Chief Minister be pleased to state —

(*a*) whether it is a fact that the Karnataka Pnblic Service ommission and Departmental Recruitment Commmittees are sending out interviews to the candidates seeking employment to the extent of only four times the number of vacancies.

(*b*) the intention of Karnataka Public Service Commission and Departmental Committee to restrict the number of candidates for interview;

(*c*) whether the Government has any proposal to suggest to Karnataka Public Service Commission and Departmental Committees to call all the candidates for interview whose application for the jobs are in order ?

SRI D. DEVARAJ URS (Chief Minister).—

(*a*) Yes.

(*b*) The rules under which recruitment is made require them to do so.

(*c*) No.

ಶ್ರೀ ಎಚ್. ಜಿ. ಚನ್ನಪ್ಪ.—ಒಂದು ಪೋಸ್ಟ್‌ಗೆ ೪ ಜನರನ್ನು ಏನು ಕರೆಯುತ್ತೀರಿ ಇದರಿಂದ ಅವರ ಹಕ್ಕುಭಾದ್ಯತೆಗೆ ಚ್ಯುತಿ ತಂದಂತೆ ಆಗುವುದಿಲ್ಲವೇ ?

† ಶ್ರೀ ಡಿ. ದೇವರಾಜ್ ಅರಸ್.—ಇದರ ಬಗ್ಗೆ ಹೈಕೋರ್ಟಿಗೆ ಹೋಗಿ, ಅವರು ಆ ಅಫೀಲನ್ನು ಸ್ಟಕ್‌ಡೌನ್ ಮಾಡಿ ಈಗಿರತಕ್ಕಂಥ ರೂಲ್ಸ್ ಸರಿಯಾಗಿದೆಯೆಂದು ಹೇಳಿದ್ದಾರೆ.

ಶ್ರೀ ಎಚ್. ಜಿ. ಚನ್ನಪ್ಪ.—ಈವಾಗ ಇದನ್ನು ಸರಿ ಮಾಡುವುದಕ್ಕೆ ಆಗುವುದಿಲ್ಲವೇ ?